# ಸಾಧಕವರೇಣ್ಯ ಶ್ರೀರಾಮಚಂದ್ರ



ಪ್ರೊ. ಟಿ.ಎಂ. ಪಂಡಿತ

**ಭಗವದ್ಗೀತೆಯಲ್ಲಿ ಹೇಳಿರುವ ಮಾನಸಿಕ ಹಾಗೂ ವಾಚಿಕ ತಪಸ್ಸಿಗೆ ಶ್ರೀರಾಮಚಂದ್ರನ ವ್ಯಕ್ತಿತ್ವವೇ ನಿದರ್ಶನ ಎಂದು ಸುಂದರವಾಗಿ ವಿವರಿಸಿರುವ ಲೇಖಕರ ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ. ಇವರು ಉತ್ತರ ಕನ್ನಡ ಜಿಲ್ಲೆಯ 'ಅಘನಾಶಿನಿ' ಗ್ರಾಮದ ನಿವಾಸಿಗಳು.**

ಸಿದ್ಧಿಯನ್ನು ಬಯಸುವವರು ಸಾಧನೆಯಿಂದ ವಿಮುಖವಾಗುವಂತಿಲ್ಲ. ಅವತಾರಪುರುಷರಿಗೂ ಇದು ತಪ್ಪಿದುದಲ್ಲ. ಭಗವಂತನು ಭೂಮಿಯಲ್ಲಿ ಮನುಷ್ಯದೇಹ ಧಾರಣೆಮಾಡಿ ಹುಟ್ಟಿದಮೇಲೆ ಮನುಷ್ಯನಂತೆಯೇ ಇದ್ದು, ಸಾಧನೆ ಮಾಡಬೇಕು. ಇಲ್ಲದಿದ್ದರೆ ಆತನು ಮಾರ್ಗದರ್ಶಿಯಾಗಲಾರನು, ಆದರ್ಶಪುರುಷನಾಗಲಾರನು. ಜನರು ಆತನನ್ನು ಅನುಸರಿಸುವ ಬದಲು, ಆಶ್ಚರ್ಯಪಟ್ಟು ಕೈಮುಗಿದು ಸುಮ್ಮನಾಗುವರು. ಏಕೆಂದರೆ ಸರ್ವಶಕ್ತನಿಗೆ ಎಲ್ಲವೂ ಸಾಧ್ಯ; ನಾವು ಶ್ರೀಸಾಮಾನ್ಯರು; ನಾವು ಅವನಂತೆ ಮಾಡುವುದು ದುಸ್ಸಾಧ್ಯ ಎಂದು ಭಾವಿಸಿಬಿಡುವರು. ಯುಗಾಚಾರ್ಯ, ಯೋಗಿವರ್ಯ ಶ್ರೀರಾಮಕೃಷ್ಣ ಪರಮಹಂಸರು ಹೀಗೆ ಹೇಳಿದ್ದಾರೆ: "ದೇವರು ನರನಾಗಿ ಬಂದಮೇಲೆ ನರನಂತೆಯೇ ಸುಖದುಃಖಗಳನ್ನು ಅನುಭವಿಸಿ, ಮಾನವನ ಸಮಸ್ಯೆಗಳನ್ನು ಮಾನವನಂತೆ ಸಾಹಸಪಟ್ಟು, ಬಿಡಿಸಿ, ಮನುಷ್ಯನಂತೆಯೇ ಕಷ್ಟಪಟ್ಟು ತಪಸ್ಸುಮಾಡಿ, ಮುಕ್ತನಾಗಬೇಕು."

ಶ್ರೀರಾಮಚಂದ್ರನು ರಾವಣವಧಾರ್ಥವಾಗಿ ನರತನುವನ್ನು ಆಶ್ರಯಿಸಿ ಬಂದ ಲೀಲಾವತಾರಿ. ಹಾಗೆಂದಮಾತ್ರಕ್ಕೆ ಅವನು ಕೇವಲ ಇಚ್ಛಾಮಾತ್ರದಿಂದ ಯಾವ ತಪಸ್ಸು, ಸಾಧನೆ, ಶ್ರಮ, ಶ್ರದ್ಧೆ ಏನೂ ಇಲ್ಲದೆ ಒಂದೇ ನೆಗೆತದಿಂದ ದೇವತ್ವಕ್ಕೆ ಹಾರಿದ ಎಂದು ಯಾರೂ ಭಾವಿಸಬಾರದು. ಅವನೂ ಮಾನವನಂತೆ ತಪಸ್ಸು (ಸಾಧನೆಯನ್ನು) ಮಾಡಲೇಬೇಕು; ಸುಖ–ದುಃಖ, ಜಯಾಪಜಯಗಳಿಗೆ ಒಳಗಾಗಿ, ಸಿದ್ಧಿಯನ್ನು ಪಡೆಯಲೇಬೇಕು.

ಸತ್ಯವೂ, ಪ್ರಿಯವೂ, ಹಿತವೂ ಆದ ಮಾತು ಮತ್ತು ವೇದದ ಸ್ವಶಾಖೆಯ ಆಳವಾದ ಅಧ್ಯಯನ ಹಾಗೂ ಉದ್ವೇಗಕರವಲ್ಲದ ಮಾತು 'ವಾಚಿಕ ತಪಸ್ಸು' ಎಂದು ಹೇಳಲ್ಪಟ್ಟಿದೆ. ಅದಕ್ಕಿಂತಲೂ ಹೆಚ್ಚಿನ ತಪಸ್ಸೆಂದರೆ ಮಾನಸಿಕ ತಪಸ್ಸು. ಮನಸ್ಸಿನ ಸುಪ್ರಸನ್ನತೆ, ಇತರರ ಅಭ್ಯುದಯವನ್ನು ಕಂಡಾಗ ಹಿರಿಹಿರಿ ಹಿಗ್ಗುವ ಮನೋಭಾವ, ಮಾತಿನಲ್ಲಿ ಸಂಯಮ, ಮನೋನಿರೋಧ, ಭಾವಸಂಶುದ್ಧಿ (ಎಂದರೆ ಇತರರೊಂದಿಗೆ ವ್ಯವಹಾರ ಮಾಡುವಾಗ ಕಪಟತೆ, ವಂಚನೆ ಇಲ್ಲದಿರುವುದು) – ಇವು ಮಾನಸಿಕ ತಪಸ್ಸಿನ ಗುಣಗೌರವಗಳು.

ಶ್ರೀಮದ್ರಾಮಾಯಣದಲ್ಲಿ ಶ್ರೀರಾಮಚಂದ್ರನು ತನ್ನ ನಡವಳಿಕೆಯಲ್ಲಿಯೇ ವಾಚಿಕ ಮತ್ತು ಮಾನಸಿಕ ಸಂಯಮವನ್ನು ಅಕ್ಷರಶಃ ಪರಿಪಾಲನೆ ಮಾಡಿದ ಎಂಬುದಾಗಿ ಉಲ್ಲೇಖಿಸಲಾಗಿದೆ. ಶ್ರೀರಾಮನ ಯೌವರಾಜ ಪಟ್ಟಾಭಿಷೇಕಕ್ಕೆ ರಾಜ ದಶರಥ ಹಾಗೂ ಅವನ ಪರಿವಾರದವರು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ಆಗ ಕೈಕೆಯಿ ಅದಕ್ಕೆ ತಡೆಹಾಕಿದಳು. ಆದರೂ ರಾಮನಿಗೆ ಸಿಟ್ಟು ಬರಲಿಲ್ಲ. ಒಂದಿನಿತೂ ಉದ್ವೇಗವಿಲ್ಲ. ಉದ್ವೇಗಕರವಾದ ಮಾತಿಲ್ಲ. ಕಡುಕೋಪಗೊಂಡ, ಉದ್ವೇಗಗೊಂಡ, ದಶರಥ, ಲಕ್ಷ್ಮಣ, ಕೌಸಲ್ಯೆ ಇವರೆಲ್ಲರಿಗೂ ತಿಳಿತಿಳಿಯಾಗಿ ಅವನು ಸಮಾಧಾನ ಹೇಳುತ್ತಾನೆ. ಅವರನ್ನೆಲ್ಲ ತನ್ನ ಶಾಂತ ಮನಸ್ಸಿನಿಂದ ಸಾಂತ್ವನಪಡಿಸುತ್ತಾನೆ. ಇಂಥ ವಿಪರೀತ ಹಾಗೂ ಆಘಾತಕರ ಸನ್ನಿವೇಶದಲ್ಲೂ ಮನುಷ್ಯ ತನ್ನ ಮನದ ಸಮತೋಲನವನ್ನು ಕೆಡಿಸಿಕೊಳ್ಳದಿದ್ದರೆ,

ಕಳೆದುಕೊಳ್ಳದಿದ್ದರೆ, ಅವನು ನಿಜವಾಗಲೂ ಜೀವೋತ್ತಮ ಹಾಗೂ ದೇವತಾಮನುಷ್ಯ. ಅಷ್ಟೇ ಏಕೆ, ಅವನು ದೇವರೆನ್ನುವುದರಲ್ಲಿ ಆಶ್ಚರ್ಯವೇನಿದೆ?

ಹಾಗೆಯೇ ಶ್ರೀರಾಮಚಂದ್ರನು ತಾಳ್ಮೆಯ ತವನಿಧಿಯೂ ಹೌದು. ಇತರರಿಗೆ ಒಳ್ಳೆಯದನ್ನು ಮಾಡುವುದೆಂದರೆ ಅವನಿಗೆ ಎಲ್ಲಿಲ್ಲದ ಮಮತೆ. ಭರತನಿಗೆ ಸರ್ವವಿಧದಿಂದಲೂ ಅಭ್ಯುದಯವು ಅನವರತವೂ ಒದಗಿಬರಲಿ ಎಂಬುದು ಅವನ ಮನದಾಳದ ಇಂಗಿತ. ಸುಗ್ರೀವನಿಗೆ ಒಳಿತಾಗಲಿ ಎಂಬುದೇ ಅವನ ಅಭಿಲಾಷೆ. ವಿಭೀಷಣನಿಗೆ ಕಲ್ಯಾಣವಾಗಲಿ ಎಂಬುದೇ ಅವನ ಆಕಾಂಕ್ಷೆ. ಇವೆಲ್ಲ ತೀರಾ ಸಹಜವಾಗಿಯೇ ಇದೆ. ಆದರೆ ತನ್ನ ಮೇಲೆ ಕೇಡಿನ ಸುರಿಮಳೆಯನ್ನೇ ಸುರಿಸಿದ ಕೈಕೇಯಿಗೂ ಶ್ರೀರಾಮನು ಸುಕ್ಷೇಮವನ್ನೇ ಬಯಸುತ್ತಾನೆ. ಆಕೆಯೇ ಅವನ ನಿಜವಾದ ತಾಯಿಯಂತೆ! "ತಾಯಿಯೆಂದರೆ ನೀನೇ" ಎಂದು ಅವಳ ಕರುಣೆಯನ್ನು ಬಾಯ್ತುಂಬಾ ಕೊಂಡಾಡುತ್ತಾನೆ, ಶ್ಲಾಘಿಸುತ್ತಾನೆ. ರಾಮಾಯಣದಲ್ಲಿ ಅನರ್ಘ್ಯ ರತ್ನಗಳಂತೆ ಇರುವ ಸನ್ನಿವೇಶಗಳಲ್ಲಿ, ಮಾತುಗಳಲ್ಲಿ ಇದೂ ಒಂದು. ಆದರ್ಶಪುರುಷನೂ, ಮರ್ಯಾದಾ ಪುರುಷೋತ್ತಮನೂ ಆದ ಶ್ರೀರಾಮನ ವ್ಯಕ್ತಿತ್ವದ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ಮಾತು ಇದು. ತಾರೆಯನ್ನು ಸೆರೆಯಲ್ಲಿಟ್ಟು ಆಳಿದ ವಾಲಿಗೂ ಅವನು ಕ್ಷೇಮವನ್ನು ಕೋರುತ್ತಾನೆ. ಶ್ರೀರಾಮ ತನ್ನ ಶತ್ರುಗಳಿಂದಲೂ ಗೌರವ ಪಡೆಯುವಂಥ ಮಹಾನುಭಾವ ಹಾಗೂ ತನ್ನ ಶತ್ರುಗಳಿಗೂ ಅಪಾರ ಗೌರವ ತೋರಿಸುವ ಗುಣಗ್ರಾಹಿ. ರಾವಣ ತನ್ನ ಪ್ರಿಯಪತ್ನಿಯಾದ ಸೀತೆಯನ್ನು ಕದ್ದೊಯ್ದು, ತನ್ನ ದಾಂಪತ್ಯ ಸುಖಕ್ಕೆ ಕೊಳ್ಳಿಹಚ್ಚಿದ ಕಡುವೈರಿ. ಆದರೂ ಶ್ರೀರಾಮನಿಗೆ ತನ್ನ ವೈರಿಯ ಬಗೆಗೆ ಅಪಾರ ಗೌರವ ಇತ್ತು. ರಾವಣನ ಪರಾಕ್ರಮವನ್ನು, ಭಕ್ತಿಯನ್ನು, ಬ್ರಾಹ್ಮಣ್ಯವನ್ನು ಮನ್ನಿಸಿ ಗೌರವಿಸಿದ ಆದರ್ಶ ಶತ್ರುವಾಗಿ ಶ್ರೀರಾಮ ಕಂಗೊಳಿಸುತ್ತಾನೆ. ತನ್ನ ಸತ್‌ಶೀಲದಿಂದ, ಸಜ್ಜನಿಕೆಯಿಂದ, ಆದರ್ಶ ಗುಣಗಳಿಂದ, ರಾಮ ರಾಮನೇ(ಮನಸ್ಸನ್ನು ರಂಜಿಸುವವನು) ಆಗಿದ್ದಾನೆ.

ರಾಮ ಎಂದರೆ ಪೂರ್ಣತತ್ತ್ವದ, ಕಾಲದೇಶಾತೀತವಾದ ಆನಂದಮಯ ಸ್ವರೂಪದ ಸಾಕಾರ ಸ್ವರೂಪ; ಮೂರ್ತ ಪ್ರತೀಕ. ರಾಮ ಆದರ್ಶಪುತ್ರ, ಆದರ್ಶಪತಿ, ಆದರ್ಶ ಸೋದರ, ಆದರ್ಶ ಮಿತ್ರ, ಅನುಪಮ ಸಾಧಕವರೇಣ್ಯ. ಶ್ರೀರಾಮಚಂದ್ರನ ಬಗೆಗೆ ಭರತಖಂಡದ ಎಲ್ಲೆಡೆಯಲ್ಲೂ ಸಹಸ್ರಾರು ವರುಷಗಳಿಂದಲೂ ಪೂಜ್ಯಭಾವನೆ ಆಳವಾಗಿ ಬೇರೂರಿದೆ. ಕೋಟ್ಯಂತರ ಜನರ ಬಾಳಿನ ಉಸಿರಾಗಿ ರಾಮನಾಮ ಈ ಪುಣ್ಯಭೂಮಿಯಲ್ಲಿ ವಿಜೃಂಭಿಸಿದೆ. 'ರಾಮ' ಎನ್ನುವುದು ಬರಿಯ ನಾಮವಷ್ಟೇ ಅಲ್ಲ; ಒಂದು ಮಂತ್ರ, ವಿಶ್ವದ ಮೂಲಶಕ್ತಿಯ ಬೀಜಮಂತ್ರ. **ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ** – 'ರಾಮ' ಎಂಬ ಒಂದೇ ನಾಮವು ವಿಷ್ಣುವಿನ ಸಹಸ್ರನಾಮಗಳಿಗೆ ಸಮಾನ ಎಂಬುದಾಗಿ ಭಗವಾನ್ ಶಿವನೇ ತನ್ನ ಪತ್ನಿ ಪಾರ್ವತಿಗೆ ಹೇಳುತ್ತಾನೆ. ರಾಮನಾಮ ಮತ್ತು ರಾಮಚರಿತವಾದ 'ರಾಮಾಯಣ' – ಇವೆರಡೂ ಜೀವನಶುದ್ಧಿಗೆ ಸಾಧಕವಾದುವು.

ಭಾರತದಲ್ಲಿ ಎಲ್ಲಾ ಕಡೆ ರಾಮಾಯಣದ ದಿವ್ಯಪಾತ್ರಗಳ ಪರಿಚಯವನ್ನು ಸಾಹಿತ್ಯ, ಶಿಲ್ಪ, ಸಂಗೀತ, ಚಿತ್ರಗಳಲ್ಲಿ ನಾವು ಕಾಣುತ್ತೇವೆ. ಶ್ರೀರಾಮನ ಅಥವಾ ರಾಮಭಕ್ತ ಆಂಜನೇಯ ಸ್ವಾಮಿಯ ಗುಡಿಯಿಲ್ಲದ ಊರು ನಮ್ಮ ನಾಡಿನಲ್ಲಿಲ್ಲ. ಅಸಂಖ್ಯಾತ ರಾಮಾಯಣ ಗ್ರಂಥಗಳು ನಮ್ಮ ಜನರಲ್ಲಿ, ಶ್ರೀರಾಮನ ಬಗ್ಗೆ ಇರುವ ನಮ್ರತೆಯನ್ನೂ ಭಕ್ತಿಗೌರವಗಳನ್ನೂ ಸೂಚಿಸುತ್ತವೆ.

ರಾಷ್ಟ್ರಕವಿ ಕುವೆಂಪು ಅವರು ತಮ್ಮ 'ಶ್ರೀರಾಮಾಯಣ ದರ್ಶನಂ' ಕೃತಿಯಲ್ಲಿ ಶ್ರೀರಾಮನನ್ನು ಆಧ್ಯಾತ್ಮಿಕ ಸಾಧಕ ಮತ್ತು ಸಿದ್ಧನೆಂದೇ ಗುರುತಿಸಿದ್ದಾರೆ. ತಮ್ಮ ಆರಾಧ್ಯದೈವರಾಗಿದ್ದ ಶ್ರೀರಾಮಕೃಷ್ಣರು ತೋರುತ್ತಿದ್ದ ಅತೀಂದ್ರಿಯ ಭಾವವನ್ನು ಶ್ರೀರಾಮನಲ್ಲಿಯೂ ಕಂಡುಕೊಂಡಿದ್ದಾರೆ. ಉದಾಹರಣೆಗೆ, ಅಹಲ್ಯೆಯು ಶಿಲಾತಪಸ್ವಿನಿಯಾಗಿದ್ದ ಗೌತಮ ಮುನಿಗಳ ಆಶ್ರಮವನ್ನು ಪ್ರವೇಶಿಸಿದ ಒಡನೆ, "ರಾಮನ ಆತ್ಮವು ಕಾರಣವಿಲ್ಲದ ಕನಿಕರದಿಂದ ಕರಗುತ್ತದೆ... ಚಿಗುರಿನ ತುದಿಯಲ್ಲಿ ತಂಗಿರುವ ಇಬ್ಬನಿ ಚಳಿಗಾಳಿ ಬೀಸಿದಾಗ ನಡಗುವಂತೆ, ರಾಮನ ಮೈ ಯಾವುದೋ ಅಲೌಕಿಕ ಆವೇಶದಿಂದ ಕಂಪಿಸಿತು... ಇತರರು ನೋಡುತ್ತಿದ್ದಂತೆಯೇ ರಾಮನು ಭಾವಸಮಾಧಿಯಿಂದ ಮಧುಪಾನ ಮಾಡಿದವನಂತೆ ನರ್ತಿಸಲು ತೊಡಗಿದನು... ಅನೇಕ ಅದ್ಭುತ ಕ್ರಿಯೆಗಳು ನಡೆದವು... ಇದುವರೆಗೆ ಜಡವಾಗಿದ್ದ ವನವು ಚೈತನ್ಯವನ್ನು ಪಡೆದು ಆನಂದಮಯವಾಯಿತು..."

ಇನ್ನೊಂದು ಸಂದರ್ಭದಲ್ಲಿ ಕೂಡ ಶ್ರೀರಾಮನು ಆಕಾಶದಲ್ಲಿ ಹಾರಾಡಿಕೊಂಡಿದ್ದ ಬೆಳ್ಳಕ್ಕಿಗಳ ಸಾಲನ್ನು ಕಂಡು ರಸವಶನಾದನೆಂದು ಕುವೆಂಪು ವರ್ಣಿಸಿದ್ದಾರೆ. "ನೋಡುತ್ತ, ನೋಡುತ್ತ ತಾನೇ ಹೊಳೆಯಾದಂತೆ, ತಾನೇ ಆಕಾಶವಾದಂತೆ, ತಾನೇ ಎಲ್ಲವೂ ಆದಂತೆ, ಎಲ್ಲವೂ ತನ್ನಲ್ಲಿ ಅಧ್ಯಾತ್ಮವಾದಂತೆ ಅತ್ಯಂತ ಮಹತ್ತಾದ ಅನುಭವವನ್ನು ಪಡೆದು ಅವನು ಮೈಮರೆತನು. ಈ ರಸಸಿದ್ಧಿಯು ರಾಮನ ಅಧ್ಯಾತ್ಮವನ್ನು ಸಕಲಲೋಕಗಳಿಗೂ ಸಾರುವ ಕಿರೀಟಪ್ರಾಯವಾದ ಭವ್ಯವಾದ ಭಗವತ್‌ಸಾಕ್ಷಿಯಲ್ಲವೇ?" (ಆಧಾರ: ಶ್ರೀಸಾಮಾನ್ಯರ ರಾಮಾಯಣದರ್ಶನಂ, ಡಾ.ಪ್ರಭುಶಂಕರ).

ವೃದ್ಧ ಚಾಣಕ್ಯ ಶತಕದಲ್ಲಿ ಸಾಧಕವರೇಣ್ಯ ರಾಮನಲ್ಲಿರುವ ಅನುಪಮ ಗುಣಗಳನ್ನು ನಿರೂಪಿಸಿರುವ ಬಗೆ ತುಂಬ ಮನೋಜ್ಞ:

**ಧರ್ಮೇ ತತ್ಪರತಾ ಮುಖೇ ಮಧುರತಾ ದಾನೇ ಸಮುತ್ಸಾಹಿತಾ**
**ಮಿತ್ರೇಽವಂಚಕತಾ ಗುರೌ ವಿನಯಿತಾ ಚಿತ್ತೇ ತು ಗಂಭೀರತಾ ।**
**ಆಚಾರೇ ಶುಚಿತಾ ಗುಣೇ ರಸಿಕತಾ ಶಾಸ್ತ್ರೇಷು ವಿಜ್ಞಾನಿತಾ**
**ರೂಪೇ ಸುಂದರತಾ ಶಿವೇ ಭಜನಿತಾ ತ್ವಯ್ಯಸ್ತಿ ಭೋ ರಾಘವ ॥**

"ಧರ್ಮದಲ್ಲಿ ಶ್ರದ್ಧೆ, ಮುಖದಲ್ಲಿ ಮಾಧುರ್ಯ, ದಾನದಲ್ಲಿ ಉತ್ಸಾಹ, ಸ್ನೇಹಿತರಲ್ಲಿ ಪ್ರಾಮಾಣಿಕತೆ, ಗುರುವಿನಲ್ಲಿ ವಿನಯ, ಮನಸ್ಸಿನಲ್ಲಿ ಗಾಂಭೀರ್ಯ, ಪರಿಶುದ್ಧ ನಡೆ, ರಸಿಕ ಗುಣ, ಶಾಸ್ತ್ರಗಳಲ್ಲಿ ಪಾಂಡಿತ್ಯ, ಅಂದವಾದ ರೂಪ, ಶಿವನಲ್ಲಿ ಭಕ್ತಿ – ಈ ಎಲ್ಲಾ ಗುಣಗಳು, ಹೇ ರಾಮ! ನಿನ್ನಲ್ಲಿ ಸಂಮಿಳಿತವಾಗಿವೆ!" ★